# ರಾಗಿಯ ಸಂಕಥನ

ಸಾಹಿತ್ಯ, ಕಲೆ, ನೃತ್ಯ, ಗಾಯನ– ಇವೆಲ್ಲವೂ ಸೃಜನಶೀಲ ವ್ಯಕ್ತಿಯೊಳಗಿನ ಭಾವಾಭಿವ್ಯಕ್ತಿಗಳೇ ಆಗಿವೆ. ಭಾವವೆನ್ನುವುದು ವ್ಯಕ್ತಿಯ ಒಳಗಿದೆ. ಅದನ್ನು ಹೇಳುವುದಕ್ಕೆ, ಅರ್ಥ ಮಾಡಿಕೊಳ್ಳುವುದಕ್ಕೆ ಒಂದು ಮಾಧ್ಯಮ ಬೇಕಷ್ಟೇ. ಇಂತಹ ಅನಿವಾರ್ಯ ಅಭಿವ್ಯಕ್ತಿಯಾಗಿ ಕವಿತೆ, ಕತೆ, ಚಿತ್ರಕಲೆ, ಗಾಯನ, ಜಲದ ಕಣ್ಣುಗಳೆಂಬಂತೆ ತೆರೆಯುತ್ತವೆ. ಭಾವದ ಭಾರ ಇಳಿಸಿದ ನಂತರ ಮನ ಹಗುರವಾಗುತ್ತದೆ. ಈ ರೀತಿಯ ಅಭಿವ್ಯಕ್ತಿಯಲ್ಲಿ ಕವಿ ಕೇವಲ ಭಾವವನ್ನು ಹೇಳಿಕೊಳ್ಳುತ್ತಾನೋ ಅಥವಾ ಭಾವದೊಂದಿಗೆ ವಾಸ್ತವದ ಚಿತ್ರಣವನ್ನು ಕಟ್ಟಿಕೊಡುತ್ತಾನೋ? ಸಮರ್ಥ ಕಲಾವಿದ ಎಲ್ಲ ಕಾಲಗಳನ್ನು, ಕಾಲದ ಸಂಕಟಗಳನ್ನು ತನ್ನ ಕಲಾಕೃತಿಯಲ್ಲಿ ಅಭಿವ್ಯಕ್ತಿಸಿಯೇ ತೀರುತ್ತಾನೆ.

ಕನಕದಾಸರ 'ರಾಮಧಾನ್ಯ ಚರಿತೆ' ಇಂತಹ ಎಲ್ಲ ಕಾಲದ ಸಂಕಟಗಳನ್ನು ಕಟ್ಟಿಕೊಡುವ ಕಾವ್ಯ. ಈ ಕೃತಿ ಹಲವು ದೃಷ್ಟಿಗಳಿಂದ ಕನಕನನ್ನು ಒಬ್ಬ ಸಮರ್ಥನಾದ, ಭಿನ್ನವಾದ ಕಾವ್ಯಶಕ್ತಿಯ ಕವಿಯನ್ನಾಗಿ ನಿರೂಪಿಸುತ್ತದೆ. ಸಾಮಾನ್ಯವಾಗಿ ಕಾವ್ಯಗಳೆಲ್ಲವೂ ಭಕ್ತಿಪಂಥದ್ದಾದರೆ ದೈವವನ್ನು ಕುರಿತಾಗಿಯೋ, ಕ್ಷಾತ್ರ ಕಾವ್ಯವಾದರೆ ಅರಸನ ಪರಾಕ್ರಮ ಕುರಿತಾಗಿಯೋ ವರ್ಣಿಸಿರುತ್ತವೆ. ಅರಸ ಮತ್ತು ದೈವವನ್ನು ಕುರಿತು ಬರೆಯುತ್ತಾ, ಮೂರನೆಯ ಕಾವ್ಯ ಮಾರ್ಗ ತಿಳಿಯದ ಸಂದರ್ಭದಲ್ಲಿ ಕನಕದಾಸ 'ರಾಗಿ'ಯಂತಹ ಸರ್ವಜನಾಂಗದ ಆಹಾರಧಾನ್ಯವನ್ನು ಕುರಿತು ಕಾವ್ಯ ಬರೆಯುತ್ತಾನೆ. ಸಾಮಾನ್ಯ ಚಿತ್ರಕ್ಕೆ ತೊಡಿಸಿದ ಸುವರ್ಣ ಚೌಕಟ್ಟು ಇದಾದರೂ ರಾಗಿಯಂತ ಧಾನ್ಯದ ಮೂಲಕ ಸಮಾಜದಲ್ಲಿ ಬೇರೂರಿರುವ ವರ್ಗ–ವರ್ಣ ಪ್ರಶ್ನೆಯನ್ನು ಕುರಿತು ಮಾತನಾಡುತ್ತದೆ.

ಕವಿ ಕಲ್ಪಿಸಿಕೊಳ್ಳುವಂತೆ ರಾಗಿಯಂತಹ ಸಾಮಾನ್ಯ ಧಾನ್ಯ, ಸಮಾಜದ ಮೇಲ್ವರ್ಗದವರಿಂದ ಕಡೆಗಣಿಸಲ್ಪಟ್ಟ ಧಾನ್ಯ ಶ್ರೀರಾಮನಿಂದ ಹೊಗಳಿಸಿಕೊಳ್ಳುವ ಸತ್ವಯುತವಾದ ಆಹಾರ ಎಂದು ಗುರುತಿಸುವ ಕಥೆಯಾಗಿದೆ. ವನವಾಸದಲ್ಲಿರುವ ಪಾಂಡವರ ಬಳಿ ಶಾಂಡಿಲ್ಯನೆಂಬ ಮುನಿ ಬರುತ್ತಾನೆ. ಅವನನ್ನು ಸತ್ಕರಿಸಿದ ನಂತರ ಪಾಂಡವರಿಗೆ ಈ ಮುನಿ ರಾಮಾಯಣದ ಉಪಕತೆಯೊಂದನ್ನು ಹೇಳಲಾರಂಭಿಸುತ್ತಾನೆ. ರಾಮ ಲಂಕೆಯಲ್ಲಿ ವಿಭೀಷಣನಿಗೆ ಪಟ್ಟ ಕಟ್ಟಿದ ನಂತರ ಸೀತೆ, ಲಕ್ಷ್ಮಣ, ಹನುಮಂತ ಹಾಗೂ ಕಪಿಸೈನ್ಯದೊಂದಿಗೆ ಅಯೋಧ್ಯೆಗೆ ಹೊರಡುತ್ತಾನೆ. ಮಾರ್ಗಮಧ್ಯದಲ್ಲಿ ಋಷಿಯ ಆಶ್ರಮವೊಂದರಲ್ಲಿ ಪರಿವಾರಸಹಿತ ತಂಗುತ್ತಾನೆ. ಮುನಿವೃಂದವೆಲ್ಲಾ ಅವನನ್ನು ಕಾಣಲು ಬರುತ್ತದೆ. ಈ ಮುನಿಗಳೆಲ್ಲಾ ಸರ್ವವಿಧದ ಆಹಾರವನ್ನು ರಾಮನಿಗಾಗಿ ತರಿಸುತ್ತಾರೆ. ಎಲ್ಲರೂ ಸಂತಸದಿಂದ ಆ ಆಹಾರವನ್ನು ಭುಜಿಸಿದ ನಂತರ ಹನುಮಂತನನ್ನು ಕರೆದು 'ಇವರ ರುಚಿಯೆಂತೆನಲು' ಎಂದು ಕೇಳುತ್ತಾನೆ. ಆಗ ಹನುಮಂತ ರಾಗಿಯಿಂದ ಮಾಡಿದ ತಿನಿಸೊಂದನ್ನು ಪ್ರಶಂಸಿಸುತ್ತಾನೆ. ರಾಮನ ಅಣತಿಯಿಂದ ಋಷಿಗಳು ಎಲ್ಲಾ ಧಾನ್ಯಗಳನ್ನು ತರಿಸಿ ರಾಮನ ಮುಂದಿಡುತ್ತಾರೆ. ಗೌತಮನಿಗೆ ರಾಮ ಸತ್ವಯುತವಾದ ಧಾನ್ಯವೊಂದನ್ನು ಆರಿಸಲು ತಿಳಿಸುತ್ತಾನೆ. ಒಂದೇ ಮಾತಿನಲ್ಲಿ ಗೌತಮ ಮುನಿ ನರೆದಲೆಗನೇ ಉತ್ತಮವಾದ ಸತ್ವಯುತವಾದ ಧಾನ್ಯವೆಂದು ತೀರ್ಪು ಹೇಳುತ್ತಾನೆ.

ತನ್ನಂತಹ ಬಣ್ಣದಿಂದಲೂ, ಶ್ರೇಷ್ಠತೆಯಿಂದಲೂ ಉತ್ತಮವಾದ ಧಾನ್ಯವನ್ನು ಪಕ್ಕಕ್ಕಿಟ್ಟು ಅಂದವಿಲ್ಲದ, ಬಣ್ಣವಿಲ್ಲದ ರಾಗಿಯನ್ನು ಶ್ರೇಷ್ಠ ಧಾನ್ಯವೆಂದು ಹೇಳಿದ ತೀರ್ಪನ್ನು ಕೇಳಿ ಭತ್ತ ರಾಗಿಯೊಂದಿಗೆ ಜಗಳಕ್ಕೆ ನಿಲ್ಲುತ್ತದೆ. ಈ ವಾಗ್ವಾದ ಕಾಲದ ಸಂಕಟವನ್ನು ಹೇಳುವಂತದ್ದು. ಶೂದ್ರ ಕುಲದಲ್ಲಿ ಹುಟ್ಟಿದ ಕನಕ ವ್ಯಾಸರಾಯನಂತಹ ಗುರುವಿನ, ಪುರಂದರದಾಸರಂತಹ ಹಿರಿಯ ವ್ಯಕ್ತಿತ್ವದ ಸಂಪರ್ಕವನ್ನು ತನ್ನ ವಿಶಿಷ್ಟತೆಯಿಂದಲೇ ಪಡೆದವನು. ಉಡುಪಿಯ ಮಠದಲ್ಲಿ ಜಾತಿಯ ಕಾರಣವಾಗಿ ಇತರ ಶಿಷ್ಯರಿಂದ ಮತ್ತೆ ಮತ್ತೆ ಅವಮಾನಕ್ಕೆ ಈಡಾದವನು. ವ್ಯಾಸರಾಯರ ಆಪ್ತ ಶಿಷ್ಯನಾದ್ದರಿಂದ ಇತರೆ ಶಿಷ್ಯರ ಅಸೂಯೆಗೆ ಒಳಗಾದವನು. ತನ್ನ ಬದುಕಿನಲ್ಲಿ ಎದುರಿಸಿದ ಜಾತಿಯೆಂಬ ಸಂಕಟವನ್ನು ಸಂಘರ್ಷವನ್ನು ರಾಮಧಾನ್ಯ ಚರಿತೆಯಲ್ಲಿ ಚಿತ್ರಿಸುತ್ತಾನೆ.

ರಾಗಿ ಕೆಳ ವರ್ಗದ ಸಂಕೇತವಾಗಿಯೋ ಪೌಷ್ಟಿಕ ಆಹಾರವಾಗಿಯೋ ಇಲ್ಲಿ ಚಿತ್ರಿತವಾಗಿದೆ. ಅಕ್ಕಿ ಶ್ರೀಮಂತರ, ಹೃದಯಹೀನರ, ರೋಗಿಗಳ, ಕೊನೆಗೆ ದೇವರ ನೈವೇದ್ಯಕ್ಕೆ ಬಳಕೆಯಾಗುವ ಸೀಮಿತ ಚೌಕಟ್ಟಿಗೆ ಒಳಪಟ್ಟಿದೆ. ಅದು ಬಡತನವನ್ನು ಕಣ್ಣೆತ್ತಿಯೂ ನೋಡದು. ಈ ಪ್ರಸಂಗದ ಮೂಲ ರಾಮಾಯಣದಲ್ಲಿಲ್ಲದ ಕನಕ ಕಲ್ಪಿತವಾದ ಘಟನೆಯಾದರೂ ಅದು ಎತ್ತುವ ವಾಗ್ವಾದ ಎಲ್ಲ ಕಾಲದಲ್ಲೂ ಇದ್ದ ಜಾತಿವ್ಯವಸ್ಥೆ ಕುರಿತಂತಾದದ್ದು ಆಗಿದೆ. ಕುವೆಂಪುರವರು ತಮ್ಮ ಶೂದ್ರತಪಸ್ವಿಯಲ್ಲಿ ಹಿಡಿಯ ಹೊರಟಿರುವುದು ತಮ್ಮ ಕಾಯಕದಿಂದಾಗಿ ಶೂದ್ರನೂ ಸಹ ಮೋಕ್ಷವನ್ನು ಪಡೆಯಬಹುದು ಎಂಬ ಹೊಸ ಸಿದ್ಧಾಂತವನ್ನು. ಹೆಬ್ಬೆರಳನ್ನು ಬಲಿಯಾಗಿ ತೆಗೆದುಕೊಳ್ಳಬಲ್ಲ ದ್ರೋಣಾಚಾರ್ಯರು ಇರುವಂತೆಯೇ ಶೂದ್ರರ ಪರವಾಗಿ ಮಿಡಿಯಬಲ್ಲ 'ಉದಾರ ರಾಮ'ನ ಅವತಾರವೂ ಸಹ ಭೂಮಿಯಲ್ಲಿ ಸಾಧ್ಯವಿದೆ ಎಂಬುದನ್ನು ಜಾತಿ ವ್ಯವಸ್ಥೆಯಲ್ಲಿ ನೊಂದಂತಹ ಕನಕದಾಸ ನಿರೂಪಿಸ ಹೊರಟಿದ್ದಾನೆ.

'ರಾಮಧಾನ್ಯದಲ್ಲಿ' ರಾಘವನೆಂಬ ರಾಮ ತನ್ನ ಪ್ರೀತಿಗೆ ಪಾತ್ರನಾದ ನರೆದಲಗನಿಗೆ 'ರಾಗಿ'ಯೆಂಬ ಹೊಸ ಹೆಸರು ಕೊಡುತ್ತಾನೆ. ರಾಮನ ಆದೇಶದಂತೆ ತೀರ್ಪನ್ನು ಕೊಡಲು ಆರು ತಿಂಗಳು ಎರಡೂ ಧಾನ್ಯಗಳನ್ನು ಸೆರೆಯಲ್ಲಿಡಲಾಗುತ್ತದೆ. ಆರು ತಿಂಗಳ ನಂತರ ತೆಗೆದುನೋಡಿದಾಗ ರಾಗಿ ನಳನಳಿಸುತ್ತಿದ್ದರೆ ಭತ್ತ ಮುಗ್ಗುಮುಗ್ಗಾಗಿ ಹಾಳಾಗಿರುತ್ತದೆ. ಬಣ್ಣಕ್ಕಿಂತ ಮುಖ್ಯವಾದದ್ದು ಎಲ್ಲ ಕಾಲಕ್ಕೂ ಎಲ್ಲ ಬಡವ ಬಲ್ಲಿದರಿಗೂ ಒದಗಿ ಬರುವ ಸಾಮರ್ಥ್ಯವನ್ನು ಹೊಂದಿರುವುದರಿಂದಲೇ ರಾಗಿ ಸರ್ವಶ್ರೇಷ್ಠ ಧಾನ್ಯ ಎಂಬ ಹೆಗ್ಗಳಿಕೆಗೆ ಗುರಿಯಾಗುತ್ತದೆ. ಇಂದಿಗೂ ಜಾತಿಯೆಂಬುದು ಏಳುಸುತ್ತಿನ ಕೋಟೆಯೇ. ನಾವು ಜಾತಿಯನ್ನು ಬಿಟ್ಟರೂ ಜಾತಿ ನಮ್ಮನ್ನು ಬಂದು ಅಪ್ಪಿಕೊಳ್ಳುತ್ತದೆ. ಸದ್ಯದ ಭಾರತದಲ್ಲಿ ಶೂದ್ರನೆನ್ನುವ ಪದ ಹೆಚ್ಚೆಚ್ಚು ಸಂಕೀರ್ಣವಾಗುತ್ತಿದೆ. ಜಾತಿ ಜಾತಿಗೂ ಒಂದು ಕೋಟೆ, ಒಂದು ಮಠ, ಮಠಕ್ಕೊಬ್ಬ ಗುರು, ಗುರುವಿನ ಜೊತೆಗೊಂದು ಭೋಗಲಾಲಸೆಗಳ ವಾತಾವರಣ ತುಂಬಿರುವಾಗ ಕನಕ ಏಕಾಂಗಿಯಾಗಿ ಇವುಗಳ ಜೊತೆ ನಡೆಸಿದ ಹೋರಾಟ ಏರ್ಪಡಿಸಿಕೊಂಡ ಸಹಸಂಬಂಧ ಹೆಮ್ಮೆಯನ್ನು ಮೂಡಿಸುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ಜೀವನವು ಕಹಿಗುಳಿಗೆ, ಸಕ್ಕರೆಯ ಮೇಲುಹೊದಿಕೆಯಿಲ್ಲದೆ ಅದನ್ನು ನುಂಗಲಾರೆವು.
  —ಡಾ. ಜಾನ್ಸನ್
- ಓದು ದೊಡ್ಡದು ಸರಿ, ಆದರೆ ಮನುಷ್ಯ ಓದಿ ಕಲಿಯುವುದಕ್ಕಿಂತ ಹೆಚ್ಚಿನ ಸಂಗತಿಯನ್ನು ತಾನೇ ಬದುಕಿ ಕಲಿಯುತ್ತಾನೆ.
  —ಮಾಸ್ತಿ ವೆಂಕಟೇಶ್ ಅಯ್ಯಂಗಾರ್
- ಬೇರೆ ಸಂಸ್ಕೃತಿಯನ್ನು ಪ್ರೀತಿಸು, ಆದರೆ ನಿನ್ನ ಸಂಸ್ಕೃತಿಯಲ್ಲಿ ಜೀವಿಸು.
  —ಮಹಾತ್ಮ ಗಾಂಧಿ
- ಪ್ರಜಾಪ್ರಭುತ್ವವೊಂದರಲ್ಲೇ ಪ್ರಭುಗಳು, ಪೊಲೀಸರು, ಪತ್ರಕರ್ತರು, ನ್ಯಾಯಾಧೀಶರು ನಗುತ್ತಾರೆ.
  —ಪಿ. ಲಂಕೇಶ್
- ದುಃಖಿಗಳಿಗಿರುವ ಏಕ ಪರಿಹಾರ 'ಆಶಯ'
  —ಷೇಕ್ಸ್‌ಪಿಯರ್
- ಮನುಷ್ಯನ ಚಾರಿತ್ರ್ಯವೇ ಅವನ ನಿಧಿ.
  —ಹೆರಾಕ್ಲಿಟಸ್
- ಮಾನವ ತಾನು ದೊಡ್ಡವನಾಗದೆ, ತನ್ನ ದೇವರನ್ನು ದೊಡ್ಡದು ಮಾಡಲಾರ.
  —ಶಿವರಾಮ ಕಾರಂತ